(ಇಂದು ದಿನಾಂಕ 24-09-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು – ವಾದಿ ಪರ ಶ್ರೀ ಎನ್.ಎಂ.ಎನ್. ವಕೀಲರಿಂದ–</u>**

ನಾನು ಮೂಡಂಗಿಯಲ್ಲಿ ವಾಸ್ತವ್ಯ ಮಾಡಿ ಬಂದಿದ್ದೇನೆ. ನನಗೆ ವಾದಿಯ ಪರಿಚಯ ಇದೆ. ಮಂಜುನಾಥ ಚಂದ್ರು ಹರಿಕಾಂತ ವಾದಿಯ ಮಗ ಎಂದರೆ ಸರಿ. ನಾನು ಮೂಡಂಗಿಯಲ್ಲಿ ವಾಸಿಸುತ್ತಿದ್ದ ಮನೆಯ ಸಂಖ್ಯೆ 103 ಆಗಿರುತ್ತದೆ. ಮನೆ ಸಂಖ್ಯೆ 103/ಅ ದಲ್ಲಿ ವಾದಿ ವಾಸವಿದ್ದಾಳೆ ಎಂದರೆ ಸಾಕ್ಷಿಯು ವಾಸವಿದ್ದಾರೆ, ಆದರೆ ಅವರ ಮನೆ ಸಂಖ್ಯೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆ ಸಂಖ್ಯೆ 103 ಮತುತ 103/ಅ ಪರಸ್ಪರ ಅಕ್ಕಪಕ್ಕದಲ್ಲಿ ಇದೆ ಎಂದರೆ ಸರಿ. ಎರಡೂ ಮನೆಗಳು ಪ್ರತ್ಯೇಕವಾಗಿದ್ದು, ವಿಭಜನೆಯ ಮೂಲಕ ಪ್ರತ್ಯೇಕ ಆಗಿರುವುದಿಲ್ಲ.

ಮನೆ ಸಂಖ್ಯೆ 103 ಮತ್ತು 103/ಅ ಮೂಲತಃ ಅನಂತ ಗಣಪಯ್ಯ ಹರಿಕಂತ್ರ ಎಂಬುವವರಿಗೆ ಸೇರಿದ್ದಾಗಿರುತ್ತದೆ. ನನ್ನ ತಾಯಿಯ ಹೆಸರು ಸಣ್ಣಿ ಜೋಗಿ ಹರಿಕಂತ್ರ ಎಂಬುದಾಗಿರುತ್ತದೆ. ಅವರ

ಮರಣಾನಂತರದಲ್ಲಿ ನನ್ನ ಹೆಸರಿಗೆ ಬದಲಾವಣೆ ಆಗಿರುತ್ತದೆ. ಮನೆ ನಂ. 103 ರ ದಾಖಲಾತಿಯು ಸುಮಾರು 2000 ನೇ ಇಸವಿಯಲ್ಲಿ ನನ್ನ ಹೆಸರಿಗೆ ಬದಲಾವಣೆ ಆಗಿರುತ್ತದೆ. ಮನೆ ನಂ.103 ಸ.ನಂ. 1482/1 ರಲ್ಲಿ ಬರುತ್ತದೆ. ಸ.ನಂ. 1482/1 ಗೋಕರ್ಣಕ್ಕೆ ಸೇರಿದ್ದಾಗಿರುತ್ತದೆ. ಸ.ನಂ. 1482/1 ರ ಪಹಣಿಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸ.ನಂ. 1482/1 ರಲ್ಲಿ ಒಟ್ಟೂ 0-8-0 ಗುಂಟೆ ಕ್ಷೇತ್ರ ಇರುತ್ತದೆ.

ಮನೆ ನಂ. 103 ರ ಸ್ವತ್ತು ನನ್ನ ತಂದೆಯವರಿಂದ ನನ್ನ ತಾಯಿಯವರಿಗೆ ಬಂದಿರುತ್ತದೆ. ಅನಂತ ಗಣಪಯ್ಯ ಹರಿಕಂತ್ರ ಇವರಿಗೆ ಮಕ್ಕಳು ಇರಲಿಲ್ಲ. ಅನಂತ ಗಣಪಯ್ಯ ಹರಿಕಂತ್ರ ನನ್ನ ಸಂಬಂಧಿ. ನನ್ನ ತಾಯಿ ಹಾಗೂ ಅನಂತ ಗಣಪಯ್ಯ ಹರಿಕಂತ್ರ ಇವರ ನಡುವೆ ಇದೇ ನ್ಯಾಯಾಲಯದಲ್ಲಿ ಒಂದು ವ್ಯಾಜ್ಯ ಇದ್ದು ನಾನೂ ಸಹ ಅದರಲ್ಲಿ ಪಕ್ಷಗಾರಳಾಗಿದ್ದೆನು ಎಂದರೆ ನನಗೆ ನೆನಪಿಲ್ಲ.

ದಾವಾ ಸ್ವತ್ತು ಒಟ್ಟು 0-10-0 ಗುಂಟೆ ಕ್ಷೇತ್ರ ಇದ್ದು, ಸದರಿ ಸ್ವತ್ತು ಅನಂತ ಗಣಪಯ್ಯ ಹರಿಕಂತ್ರ ಇವರಿಗೆ ಸೇರಿದ್ದಾಗಿರುತ್ತದೆ. ಸನ್ 1993 ನೇ ಇಸವಿಯಲ್ಲಿ ಮೂ.ದಾ. ನಂ. 88/1992 ರಲ್ಲಿ ಆದಂತಹ ರಾಜಿ ಡಿಕ್ರಿಯ ಮೇರೆಗೆ ದಾವಾ ಸರ್ವೆ ನಂಬರನಲ್ಲಿ 0-5-0 ಗುಂಟೆ ಕ್ಷೇತ್ರವನ್ನು ನನ್ನ ತಾಯಿಯವರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿ. ಅದರಂತೆ ಸದರಿ 0-5-0 ಕ್ಷೇತ್ರಕ್ಕೆ ನನ್ನ ಮತ್ತು ನನ್ನ ತಾಯಿಯವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ನಮೂದು ಆಯಿತು ಎಂದರೆ ಸರಿ. ನಾನು ಸದರಿ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ಸದರಿ ವಿಚಾರವನ್ನು ವಕೀಲರಿಗೆ ತಿಳಿಸಬೇಕೆಂದು ನನಗೆ ಗೊತ್ತಾಗಿರುವುದಿಲ್ಲ.

ಅನಂತ ಹರಿಕಂತ್ರ ಇವರು ಮನೆ ನಂ. 103/ಅ ನಲ್ಲಿ ವಾಸವಿದ್ದರು ಎಂದರೆ ಸಾಕ್ಷಿಯು ನನ್ನ ರೀತ್ಯಾ ಅವರುವಾಸವಿದ್ದ ಮನೆ ನಂ. 102 ಆಗಿರುತ್ತದೆ ಎಂದು ನುಡಿಯುತ್ತಾರೆ. ಅನಂತ ಹರಿಕಂತ್ರ ಇವರು ವಾಸವಿದ್ದ ಮನೆಯಲ್ಲಿಯೇ ಹಾಲಿ ವಾದಿ ವಾಸ ಇರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆ

ದಾಖಲಾದ ನಂತರದಲ್ಲಿ ನಾನು ವಾದಿ ವಾಸವಿರುವ ಮನೆ ನಂಬರನ್ನು ತಿಳಿದುಕೊಂಡಿರುವುದಿಲ್ಲ. ವಾದಿ ವಾಸವಿರುವ ಮನೆಯು ರಾಜಿ ಡಿಕ್ರಿಯಲ್ಲಿ ನನ್ನ ತಾಯಿಯವರಿಗೆ ನೀಡಲಾದ 0-5-0 ಗುಂಟೆ ಹೊರತುಪಡಿಸಿ ಇತರ 0-5-0 ಗುಂಟೆ ಕ್ಷೇತ್ರದಲ್ಲಿ ಇದೆ ಎಂದರೆ ಸರಿ. ಅನಂತ ಹರಿಕಂತ್ರ ಇವರ 0-5-0 ಗುಂಟೆ ಕ್ಷೇತ್ರದಲ್ಲಿ ಹಾಲಿ ಮನೆ ಇರುತ್ತದೆ.

ನಾನು ವಾಸವಿರುವ ಮನೆ ಹಾಗೂ ವಾದಿ ವಾಸವಿರುವ ಮನೆಗೆ ಪ್ರತ್ಯೇಕವಾದ ಕಂಪೌಂಡ ಇದೆ ಎಂದರೆ ಸರಿಯಲ್ಲ. ಅನಂತ ಗಣಪಯ್ಯ ಹರಿಕಂತ್ರ ಎಂಬ ವ್ಯಕ್ತಿ ನನ್ನೊಂದಿಗೆ ವಾಸವಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯ ಮಗ ಮಂಜುನಾಥ ನನ್ನ ವಿರುದ್ಧ ಕುಮಟಾದ ಸಿವಿಲ್ ನ್ಯಾಯಾಲಯದಲ್ಲಿ ಮೂ. ದಾ. ನಂ. 24/2020 ರೀತ್ಯಾ ದಾವೆಯನ್ನು ಹೂಡಿದ್ದಾನೆ ಎಂದರೆ ಸರಿ. ಸದರಿ ದಾವೆಯ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿ ದಾವೆಯಲ್ಲಿ ಮೂ.ದಾ. ನಂ. 52/2003 ರಲ್ಲಿ ಆದಂತಹ ರಾಜಿ ಡಿಕ್ರಿಯಂತೆ 0-3-0 ಗುಂಟೆ ಕ್ಷೇತ್ರವನ್ನು ದಾವಾ ಸರ್ವೆ ನಂಬರಿನಲ್ಲಿ ಅನಂತ ಗಣಪಯ್ಯ ಹರಿಕಂತ್ರ ಇವರು ವಾದಿಯ ಮಗನಿಗೆ ಬಿಟ್ಟುಕೊಟ್ಟಿರುವುದಾಗಿ ತಿಳಿಸಿರುತ್ತಾನೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ಲಿಖಿತ ತಕರಾರನ್ನು ಸಲ್ಲಿಸಿರುತ್ತೇನೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ